೧೯.	ಮೈಸೂರು	೧೪೭೬
೧	ಮೈಸೂರು	೩೮೧
೨	ಟಿ. ನರಸೀಪುರ	೧೯೫
೩	ಕೊಳ್ಳೇಗಾಲ	೯೦
೪	ನಂಜನಗೂಡು	೩೦೭
೫	ಚಾಮರಾಜನಗರ	೧೪೦
೬	ಹುಣಸೂರು	೧೯
೭	ಯಳಂದೂರು	೧೨೫
೮	ಕೆ. ಆರ್. ನಗರ	೬೭
೯	ಪಿರಿಯಾಪಟ್ಟಣ	೫೪
೧೦	ಹೆಚ್.ಡಿ. ಕೋಟೆ	೬೮
೨೦.	ದಕ್ಷಿಣ ಕನ್ನಡ	೪೨೦೪
೧	ಕುಂದಾಪುರ	೨೯೧
೨	ಉಡುಪಿ	೫೭೬
೩	ಕಾರ್ಕಳ	೫೩೧
೪	ಮಂಗಳೂರು	೧೯೧೫
೫	ಬಂಟ್ವಾಳ	೫೧೧
೬	ಬೆಳ್ತಂಗಡಿ	೧೧೧
೭	ಪುತ್ತೂರು	೨೫೫
೮	ಸೂಳ್ಯ	೧೪

ಸಿ ಮತ್ತು ಡಿ ದರ್ಜೆಯ ಅರಣ್ಯ ಭೂಮಿ ಅತಿಕ್ರಮ ಮಾಡಿದ ರೈತರಿಗೆ ಸಕ್ರಮ ಮಾಡುವ ಬಗ್ಗೆ

೪೦೫ (೪೦೫) ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ). ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ರಾಜ್ಯ ಸರ್ಕಾರ, ಅರಣ್ಯ ಭೂಮಿ ಸಿ ಮತ್ತು ಡಿ ದರ್ಜೆ, ಗೋಮಾಳ, ಕೆರೆಯಂಗಳ ಮುಂತಾದ ಸರ್ಕಾರಿ ಭೂಮಿಗಳಲ್ಲಿ ಅತಿ ಕ್ರಮ ಬೇಸಾಯ ಮಾಡಿದ ಕೃಷಿಕರ ಭೂಮಿಯನ್ನು ಸಕ್ರಮ ಗೊಳಿಸಲು ಸರ್ಕಾರದವರು ನಿರ್ಣಯ ಕೈಗೊಂಡಿರುವುದು ನಿಜವೇ ?

ಆ) ಈ ಸರ್ಕಾರಿ ನಿರ್ಣಯದ ನಂತರ ಸಕ್ರಮ ಸಾಗುವಳಿದಾರರಿಗೆ, ಪಟ್ಟಾ ವಿತರಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಇ) ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ (ಬಗರ್‌ಹುಕುಂ) ಸಾಗುವಳಿಗೆ ಒಳಗಾದ ಭೂಮಿಯ ವಿಸ್ತೀರ್ಣವೆಷ್ಟು (ತಾಲ್ಲೂಕುವಾರು ವಿವರಗಳನ್ನೊದಗಿಸುವುದು) ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು). —

ಅ) ಹೌದು.

ಆ) ೧೯೮೬ರ ಕರ್ನಾಟಕ ಭೂ ಕಂದಾಯ (ವಿಶೇಷ) ತಿದ್ದುಪಡಿ ವಿಧೇಯಕವನ್ನು ಮತ್ತು ಅದರ ಮೇಲಿನ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ದಿನಾಂಕ ೭-೯-೮೭ ರಂದು ವಿಧಾನಸಭೆಯಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಮಂಡಿಸಲಾಯಿತು. ಇದಕ್ಕೆ ವಿಧಾನ ಮಂಡಲವು ಅನುಮೋದನೆ ನೀಡಿದ ನಂತರ ಪಟ್ಟಾ ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಅನುಬಂಧದಲ್ಲಿ ಕೊಡಲಾಗಿದೆ.

"ಅನುಬಂಧ"

ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಸಾಗುವಳಿಗಳಿಗೆ ಒಳಗಾದ ಭೂಮಿಯ (ತಾಲ್ಲೂಕುವಾರು) ವಿಸ್ತೀರ್ಣ

೧)	ಶಿವಮೊಗ್ಗ ಜಿಲ್ಲೆ	ಎಕರೆ – ಗುಂಟೆ
೧	ಶಿವಮೊಗ್ಗ	೧೦,೬೬–೨೪
೨	ಭದ್ರಾವತಿ	೯,೪೧೭–೧೦
೩	ಚನ್ನಗಿರಿ	೪,೫೦೨–೨೧
೪	ಹೊನ್ನಾಳಿ	೫,೨೩೦–೦೧
೫	ತೀರ್ಥಹಳ್ಳಿ	೨,೩೫೫–೦೮
೬	ಸಾಗರ	೪,೬೭೨–೩೦
೭	ಶಿಕಾರಿಪುರ	೪,೦೬೬–೩೧
೮	ಸೊರಬ	೬,೩೯೮–೧೦
೯	ಹೊಸನಗರ	೫,೧೦೪–೦೩
	ಒಟ್ಟು	೫೨,೩೮೩,–೧೮

೨)	ದಕ್ಷಿಣ ಕನ್ನಡ	
೧	ಬೆಳ್ತಂಗಡಿ	೧೦,೨೭೫–೨೩
೨	ಪುತ್ತೂರು	೮,೮೮೫–೩೫
೩	ಸೂಳ್ಯ	೪,೨೧೮–೦೦
೪	ಉಡುಪಿ	೧,೬೯೭–೦೦
೫	ಕಾರ್ಕಳ	೨,೪೨೬–೧೩
೬	ಮಂಗಳೂರು	೩,೧೬೧–೫೫
೭	ಮಂಗಳೂರು	೧,೪೪೫–೬೯
೮	ಬಂಟ್ವಾಳ	೩,೪೩೨–೭೧
	ಒಟ್ಟು	೩೫,೬೪೦–೬೬

ಭೂ ಸುಧಾರಣಾ ಕಾನೂನಿನ್ವಯ ಕೃಷಿ ಭೂಮಿ ಪಡೆದ ಗೇಣಿದಾರರಿಗೆ ಉಚಿತ ಪಟ್ಟಾ ವಿತರಣೆ

೪೦೬ (೪೧೨) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿ ಭೂ ಸುಧಾರಣೆ ಕಾನೂನಿನ್ವಯ ಕೃಷಿ ಭೂಮಿ ಪಡೆದ ಗೇಣಿದಾರರಿಗೆ ಉಚಿತ ಪಟ್ಟಾದ ವಿತರಣೆ ಮಾಡುವ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆಯೇ ?

(ಆ) ಮೇಲ್ಕಂಡ ನಿರ್ಣಯವಿದ್ದಾಗ್ಯೂ ಕೂಡಾ ಗೇಣಿದಾರರಿಂದ ಪರಿಹಾರದ ಹಣದ ಪ್ರೀಮಿಯಂಗಳ ವಸೂಲಾತಿಯನ್ನು ಏಕೆ ಮಾಡಲಾಗುತ್ತಿದೆ ?

(ಇ) ಈ ರೀತಿ ಹಣ ವಸೂಲಿ ಮಾಡಿರುವುದು ಸರ್ಕಾರಿ ನಿರ್ಣಯದ ಉಲ್ಲಂಘನೆಯಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—